ನಂ.ಪುಸ/ಕಾವಿ/ಎಸ್.ಎಫ್.ಸಿ/ಟೆಂಡರ್/2007-08

ಪುರಸಭಾ ಕಾರ್ಯಾಲಯ
ಭಟ್ಕಳ ದಿ : 28-4-2007

# ಅಲ್ಪಾವಧಿ ಟೆಂಡರ್ ಪ್ರಕಟಣೆ

ಭಟ್ಕಳ ಪುರಸಭೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಭಟ್ಕಳ ಪುರಸಭೆಯು ಎಸ್.ಎಫ್.ಸಿ ಅನುದಾನದಡಿಯಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಪರಸಂಟೇಜ್ ದರದಲ್ಲಿ ಮಾಡಲು ಟೆಂಡರ್ ಕರೆದಿದ್ದು, ಆಸಕ್ತಿಯುಳ್ಳ ಗುತ್ತಿಗೆದಾರರು ಈ ಕೆಳಗಿನ ಶರ್ತಿಗೆ ಒಳಪಟ್ಟು ದಿ : 9-5-2007 ರ ಸಾಯಂಕಾಲ 4.00 ಗಂಟೆಯ ಒಳಗಡೆ ತಮ್ಮ ದರವಾರವನ್ನು ಸೀಲ್ ಬಂದ್ ಲಕೋಟೆಯಲ್ಲಿಟ್ಟು ಪುರಸಭೆಯಲ್ಲಿಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ಹಾಕಬಹುದಾಗಿದೆ. ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

| ಅ. ನಂ. | ಕಾಮಗಾರಿ ಹೆಸರು | ಅಂದಾಜು ರಖಂ | ಇ.ಎಂ.ಡಿ. ರೂ. | ಅವಧಿ |
|---|---|---|---|---|
| 1 | 2 | 3 | 4 | |
| 1 | ಸಿದ್ಧಿಕ್ ಸ್ಟ್ರೀಟನಲ್ಲಿ ನೀರು ಸರಬರಾಜು ಪೈಪ್‌ಲೈನ್ ಅಳವಡಿಸುವುದು. | 3,00,000-00 | 7,500-00 | 30 ದಿವಸ |
| 2 | ಮುಗ್ದುಮ ಕಾಲೋನಿ ಗುಲ್ಜಾರ್ ಸ್ಟ್ರೀಟ ಹಾಗೂ ರೋಶನ್ ಸ್ಟ್ರೀಟನಲ್ಲಿ ಗಟಾರು ಕಟ್ಟುವುದು. | 3,00,000-00 | 7,500-00 | 30 ದಿವಸ |

## ಶರ್ತುಗಳು :

1. ಟೆಂಡರ್ ಫಾರ್ಮಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 7-5-2007
2. ಖಾಲಿ ಟೆಂಡರ್ ಫಾರ್ಮ ನೀಡುವ ದಿನಾಂಕ : 8-5-2007
3. ಟೆಂಡರ್ ಫಾರ್ಮನ್ನು ಗುತ್ತಿಗೆದಾರರ ಸಮಕ್ಷಮ ದಿನಾಂಕ : 9-5-2007 ರಂದು ತೆರೆಯಲಾಗುವುದು.
4. ಟೆಂಡರ್ ಫಾರ್ಮಿಗೆ ಅರ್ಜಿ ಸಲ್ಲಿಸುವಾಗ ಟೆಂಡರ್ ಫಾರ್ಮ ಶುಲ್ಕ ರೂ. 200/- ನಗದು ಹಾಗೂ ಇ.ಎಂ.ಡಿ. ಯನ್ನು ಡಿ.ಡಿ. ರೂಪದಲ್ಲಿ ನೀಡತಕ್ಕದ್ದು.
5. ಮಾರಾಟ ತೆರಿಗೆಯ ಇಲಾಖೆಯಲ್ಲಿ ನೋಂದಣಿಯಾಗದೇ ಇರುವ ಗುತ್ತಿಗೆದಾರರ ಬಿಲ್‌ನಲ್ಲಿ ಶೇಕಡಾ 12 1/2 ಮಾರಾಟ ತೆರಿಗೆ ಮುರಿದು ಕೊಳ್ಳಲಾಗುವುದು.
6. ಗುತ್ತಿಗೆದಾರರು **Tin (ವ್ಯಾಟ್)** ಹಾಗೂ ಪಾನ್ ನಂ. ಹೊಂದಿರತಕ್ಕದ್ದು.
7. ಟೆಂಡರ್ ಬಗ್ಗೆ ಪುರಸಭೆಯ ನಿರ್ಣಯ ಅಂತಿಮವಾಗಿರುತ್ತದೆ. ಅದನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇರುವುದಿಲ್ಲ.
8. ಟೆಂಡರ್ ಪ್ರಕಟಣೆಯಲ್ಲಿ ನೀಡಿದ ದಿನದಂದು ಯಾವುದೇ ಸರಕಾರಿ ರಜೆ ಇದ್ದಲ್ಲಿ ರಜೆಯ ನಂತರದ ದಿನ ಅಂತ ಪರಿಗಣಿಸಬಹುದು.

9. ಕಾರಣ ನೀಡದೇ ಟೆಂಡರ್ ಮುಂದೂಡುವ ಇಲ್ಲವೇ ರದ್ದು ಪಡಿಸುವ ಅಧಿಕಾರ ಪುರಸಭೆ ಕಾಯ್ದಿರಿಸಿಕೊಂಡಿದೆ.
10. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಯಾದ ದಿನಾಂಕದಿಂದ ಮುಂದುವರಿಯುವಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಗೆ ಗುತ್ತಿಗೆದಾರರೇ ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ನಿರ್ವಹಿಸತಕ್ಕದ್ದು.
11. ಪುರಸಭೆ ನಿಧಿಯಲ್ಲಿ ನಡೆಯುವ ಕಾಮಗಾರಿಗಳ ಬಿಲ್ಲುಗಳನ್ನು ಹಣಕಾಸಿನ ಅನುಕೂಲತೆಯನ್ನು ಪರಿಶೀಲಿಸಿ ಬಿಲ್ ಬಟವಡೆ ಮಾಡಲಾಗುವುದು.
12. ಟೆಂಡರ್‌ನಲ್ಲಿ ತಿಳಿಸಿದ ಅಂದಾಜಿಗಿಂತ ಹೆಚ್ಚಿನ ಕಾಮಗಾರಿ ಆದಲ್ಲಿ ನೀವು ಹಾಕಿದ ಟೆಂಡರ್ ದರ ಅಥವಾ ಅಂದಾಜು ದರ ಅದರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಅನುಗುಣವಾಗಿ ಬಿಲ್ ನೀಡಲಾಗುವುದು.
13. 2005–2010 ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡ ಗುತ್ತಿಗೆದಾರರು ಅದರಂತೆ ಪುರಸಭೆಯಲ್ಲಿಯೂ ನೋಂದಣಿ ಮಾಡಿಕೊಂಡಂತಹ ಗುತ್ತಿಗೆದಾರರು ಮಾತ್ರ ಟೆಂಡರ್ ಹಾಕಲು ಅರ್ಹರಾಗಿರುತ್ತಾರೆ.
14. ಟೆಂಡರ್ ಪ್ರಕಟಣೆಯ ಬಗ್ಗೆ ಮಾಹಿತಿಯನ್ನು ವೆಬ್‌ಸೈಟ್ ವಿಳಾಸ **www.bhatkaltown.gov.in** ದಲ್ಲಿ ಪಡೆಯಬಹುದಾಗಿದೆ.

ಸಹಿ ಇದೆ/–
ಆಡಳಿತಾಧಿಕಾರಿಗಳು
ಪುರಸಭೆ, ಭಟ್ಕಳ (ಉ.ಕ.)

ಸಹಿ ಇದೆ/–
ಪೌರಾಯುಕ್ತರು
ಪುರಸಭೆ, ಭಟ್ಕಳ (ಉ.ಕ.)